7

# ಕೇಳುವ ಪ್ರತಿಯೊಬ್ಬನಿಗೂ ಪ್ರತ್ಯುತ್ತರಿಸುವದಕ್ಕೆ ಸಿದ್ಧವಾಗಿರಿ (1 ಪೇತ್ರ 3:8-22)

ಕೆಲವಾರು ವರುಷಗಳ ಹಿಂದೆ, ಪಶ್ಚಿಮ ಯೂರೋಪಿನಲ್ಲಿ ನಾನು ಬೋಧನೆಗಳನ್ನು ನೀಡುವಾಗ, ಕೆನಡ ದೇಶದ ಕೆಲವು ಸುವಾರ್ತಿಕರನ್ನು ಸಂಧಿಸುವ ಅವಕಾಶವು ನನಗೆ ದೊರೆಯಿತು, ಅವರು ಅಮೇಲಿಕದವರಾಗಿದ್ದರು. ಹಾಲೆಂಡಿನವರು, ಬೆಲ್ಜಿಯಂನಿಂದ ಬಂದವರು, ಫ್ರಾನ್ಸ್, ಸ್ವಿಟ್‌ಜರ್‌ಲ್ಯಾಂಡ್, ಹಾಗೂ ಪಶ್ಚಿಮ ಜರ್ಮನಿಗೆ ಸೇಲಿದವರಾಗಿದ್ದರು. ಪಶ್ಚಿಮ ಜರ್ಮನಿಯ ಗೆಮುಂಡೆನ್ ಪ್ರಾಂತದ, ಯೌವನಸ್ಥರ ಸಮ್ಮೇಳನಕ್ಕಾಗಿ ಸೇರಿ ಬಂದಿದ್ದೆವು. ಅಲ್ಲಿ ಹಲವು ರಾಷ್ಟ್ರದ ಪ್ರತಿನಿಧಿಗಳು ಸೇರಿ ಬಂದಿದ್ದರು; ಈ ಅಧ್ಯಯನವನ್ನು ಕೇಳಲು ಅನೇಕರು ಬಹುದೂರದಿಂದ ಪ್ರಯಾಣ ಮಾಡಿ ಬಂದಿದ್ದರು. ಅವರು ನನ್ನ ಸಂದೇಶವನ್ನು ಆಲಿಸಲು ಬಂದಿದ್ದರು ಎಂದು ನಾನು ಹೆಮ್ಮೆ ಪಡಬಹುದಾಗಿತ್ತು, ಆದರೆ ನಾನು ಅವರನ್ನು ನೋಡಿ ಗಮನಿಸಿದಾಗ, ಅವರು ಪರಸ್ಪರ ಒಂದೇ ಮನೋಭಾವದಲ್ಲಿದ್ದದ್ದು ಸ್ಪಷ್ಟವಾಯಿತ್ತು. ಪರಸ್ಪರರಲ್ಲಿ ಇದ್ದಂಥ ಆಸಕ್ತಿ ಮತ್ತು ಕ್ರಿಸ್ತನ ಪ್ರೀತಿಯು ಎದ್ದು ಕಾಣುತ್ತಿತ್ತು; ಅವರುಗಳು ಹಿಂಸೆಗೆ ಒಳಗಾಗಿದ್ದರಿಂದ ಅವರಲ್ಲಿ ಈ ಭಾವನೆಗಳು ಉದ್ಭವಿಸಿದ್ದವು. ಇತರೆ ಸ್ಥಳಗಳಲ್ಲೂ ನಾನು ಈ ರೀತಿಯಾದ ಪರಿಸ್ಥಿತಿಯನ್ನು ನೋಡಿದ್ದೇನೆ: ಸಂಖ್ಯೆಯು ಕಡಿಮೆ ಇರುವಲ್ಲಿ, ಅಡ್ಡಿಗಳು ಹೇರಳವಾಗಿರುತ್ತವೆ, ಕ್ರೈಸ್ತರು ದೇವರನ್ನು ಆಶ್ರಯಿಸಿ, ಪರಸ್ಪರರ ಬಲದಲ್ಲಿ ಅವಲಂಭಿಸಿರಬೇಕು.

ಪಶ್ಚಿಮ ಜರ್ಮನಿಯಲ್ಲಿ, ವಾರಗಟ್ಟಲೆ ವಾಕ್ಯವನ್ನು ಬೋಧಿಸುವ ಮೂಲಕ ಸಮೂದಾಯದಲ್ಲಿ ಒಳಗೊಂಡಿರುವ ಐಕ್ಯತೆ ಮತ್ತು ಒಂದಾಣಿಕೆಯ ಅನುಭವವು ನನಗೆ ಉಂಟಾಯಿತು. ಇದರಿಂದ, ಆಸ್ಯ ಸೀಮೆಯಲ್ಲಿ ಕ್ರೈಸ್ತರಲ್ಲಿಯೂ ಇದೇ ರೀತಿಯಾದ ಅನುಭವವಿತ್ತು ಎಂದು ನಾನು ಊಹಿಸುತ್ತೇನೆ. ಪೇತ್ರನು ತನ್ನ ಮೊದಲ ಪತ್ರದಲ್ಲಿ, ಆತಂಕಗೊಂಡಿದ್ದ ಚಿಕ್ಕ ಗುಂಪಿನ ಸಭೆಯೊಂದಿಗೆ ಸಂವಾದ ಮಾಡಿದ್ದನು. ದೊಡ್ಡ ಸಭೆಗಳ ಸದಸ್ಯರುಗಳು, ಆರಾಮದಾಯಕವಾಗಿರುವ ಸಭೆಗಳು, ಕ್ರಿಸ್ತನಲ್ಲಿರುವ ಜೀವಿತಕ್ಕೂ ಮತ್ತು ಪ್ರಪಂಚದ ಜೀವಿತಕ್ಕೂ ನಡುವೆ ಇರುವ ಮೇರೆಗಳನ್ನು ಗೊಂದಲಮಯಗೊಳಿಸುತ್ತಾರೆ, ಆದರೆ ಪೇತ್ರನ ಪತ್ರದ ಮೊದಲ ಓದುಗರು ಇಂಥ ಶೋಧನೆಗೆ ಒಳಪಡಲಿಲ್ಲ. ವೈರಿಗಳು ಅವರಿಗೆ ಸವಾಲನ್ನು ಹಾಕಿದರು, ಅವರಲ್ಲಿ ಪ್ರಶ್ನೆಗಳನ್ನು ಹಾಕಿದರು, ಅವರನ್ನು ನಿಂದನೆಗೆ ಒಳಪಡಿಸಿದರು. ಅವರ ನಂಬಿಕೆಯ ಕುರಿತಾಗಿ ಪ್ರತ್ಯುತ್ತರವು ಅವರಲ್ಲಿ ಇರಬೇಕಿತ್ತು. ನಿಂದನೆಗೆ ಆಶೀರ್ವಾದದಿಂದ ಉತ್ತರಿಸಬೇಕೆಂದು ಕ್ರೈಸ್ತರಿಗೆ ಸಲಹೆಯನ್ನು ನೀಡಿದನು (3:9), ಮಾತ್ಸರ್ಯ ತೋರುವವರಿಗೆ ಪ್ರೋತ್ಸಾಹವನ್ನು (3:13), ಅಪರಾದಕ್ಕೆ ಕ್ರಿಸ್ತನ ಶಿಲುಬೆಯ ಮೂಲಕ ಉತ್ತರಿಸಿ ಎಂದು ಸೂಚಿಸಿದನು (3:18).

## ನಿಂದೆಗೆ, ಆಶೀರ್ವಾದದ ಉತ್ತರ ನೀಡಿರಿ (3:8-12)

ಕೆಲವು ಉತ್ತರಗಳನ್ನು ಪದಗಳಿಂದ ನೀಡಬೇಕಾಗುತ್ತದೆ. ಅದನ್ನು ಕ್ರೈಸ್ತ ವರ್ತನೆಯಿಂದ ತೋರಬಹುದಾಗಿದೆ. ಪೇತ್ರನು ತನ್ನ ಓದುಗರಿಗೆ ವಾಗ್ವಾದಗಳನ್ನು ಮತ್ತು ಪದಗಳನ್ನು ಉಪಯೋಗಿಸಿ ಉತ್ತರವನ್ನು ನೀಡದೆ, ಜೀವನ ಶೈಲಿಯ ಮೂಲಕ ಉತ್ತರಿಸಿ ಎಂದು

ಸೂಚಿಸಿದ್ದಾನೆ. ಇದರಲ್ಲಿ ಒಂದು ವಿಧವಾದ ತರ್ಕದ ಕ್ರಮವಿದೆ. ಯೇಸುವಿನ ಸಂದೇಶವನ್ನು ಕೇವಲ ಬೋಧನೆಗಳಿಗಿಂತಲೂ, ಕ್ರಿಯೆಯಿಂದ ಪ್ರಚುರಪಡಿಸುವುದು ವಿಶೇಷವಾದ ಪರಿಣಾಮವನ್ನು ಲೋಕದಲ್ಲಿ ತೋರಿಸುವುದಾಗಿದೆ. ಕ್ರಿಸ್ತನು ಲೋಕವನ್ನು ಅವರ ಮೂಲಕ ಹೊಸ ಸೃಷ್ಟಿ ಮಾಡುವದಕ್ಕಿಂತ ಮೊದಲು, ಅವರಲ್ಲಿಯೇ ಹೊಸ ಸೃಷ್ಟಿ ಉಂಟಾಗಬೇಕು. 3:8ರಲ್ಲಿ ನಮೂದಾಗಿರುವ ವರ್ತನೆಯ ಕುರಿತಾದ ಬೋಧನೆಗಳು ಸಭೆಗೆ ವಿರೋಧವಾಗಿ ಉಂಟಾದ ನಿಂದನೆಗಳಿಗೆ ಸರಳವಾದ ಪ್ರತ್ಯುತ್ತರವಾಗಿದೆ. ಪ್ರತಿಯೊಂದು ಪದಗಳು ಕ್ರೈಸ್ತರಿಗೆ ಅಮೂಲ್ಯವಾದ ಮುತ್ತಿನಂತ ಸಲಹೆಗಳಾಗಿದ್ದವು: "ಕಡೆಗೆ ನೀವೆಲ್ಲರೂ ಏಕೆ ಮನಸ್ಸುಳ್ಳವರಾಗಿರಿ; ಪರರ ಸುಖದುಃಖಗಳಲ್ಲಿ ಸೇರುವವರಾಗಿರಿ; ಅಣ್ಣ ತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿರಿ, ಕರುಣೆಯೂ ದೀನಭಾವವು ಉಳ್ಳವರಾಗಿರಿ" (3:8).

ಪೇತ್ರನ ಓದುಗರು ಪ್ರಥಮವಾಗಿ, "ಏಕಮನಸ್ಸುಳ್ಳವರಾಗಿರಬೇಕು" ಎಂದು ತಿಳಿಸಿದನು, ಈ ಹೊಸ ಒಡಂಬಡಿಕೆಯ ಗ್ರೀಕ್ ವ್ಯಾಖ್ಯಾನವು ಇಲ್ಲಿ ಮಾತ್ರ ತಿಳಿಸಲಾಗಿದೆ. ತಮ್ಮ ಮುಂದೆ ಉದ್ಭವಿಸುವ ಸಕಲ ಪ್ರಶ್ನೆಗಳಿಗೆ, ಎಲ್ಲರೂ ಒಂದೇ ರೀತಿಯಾದ ಒಪ್ಪಿಗೆ ಇರಬೇಕು ಎಂದು ಅಪೊಸ್ತಲರು ತಿಳಿಸಿದರು ಅದರ ಬದಲಾಗಿ, ನಮ್ಮ ಯೋಚನೆಗಳು ಒಂದೇಯಾಗಿರಬೇಕು, ಉತ್ತರಿಸುವ ಒಂದೇ ಅಂಶವು ಇರಬೇಕು ಎಂದು ತಿಳಿಸುತ್ತಿದ್ದಾರೆ. ಫಿಲಿಪ್ಪಿಯವರು ಅವನ ಸಂತೋಷವನ್ನು ಪರಿಪೂರ್ಣ ಮಾಡಬೇಕು, ಎಂಬ ಪೌಲನ ಹೇಳಿಕೆಗೂ ಮತ್ತು ಈ ಮೇಲೆ ಕಾಣಿಸಿದ ಹೇಳಿಕೆಗೂ, ಯಾವುದೇ ವ್ಯತ್ಯಾಸವಿರುವದಿಲ್ಲ, "ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ, ಅನ್ಯೋನ್ಯಭಾವವುಳ್ಳವರೂ ಒಂದೇ ಗುರಿಯಿಟ್ಟು ಕೊಂಡವರು ಆಗಿರಿ" (ಫಿಲಿಪ್ಪಿ 2:2).

"ಕಾರುಣ್ಯ" ಎಂಬ ಪದವು ಪೇತ್ರನ ಟಿಪ್ಪಣಿಯಲ್ಲಿ ಎರಡನೆಯ ಪದವಾಗಿದೆ. ಇಲ್ಲಿ ಉಪಯೋಗಿಸಿರುವ ಪದವು ಮತ್ತು ರೋಮಾಪುರ 12:15 ಒಬ್ಬನಿಗೆ ಇರುವ ವೇದನೆಯು ಇನ್ನೊಬ್ಬನಿಗೂ ಇರುತ್ತದೆ ಎಂಬ ಅರ್ಥವಿದೆ, ಆದುದರಿಂದ ಅವನ ನೋವನ್ನು ನೀಗಿಸುವಂಥದ್ದನ್ನೇ ಒಬ್ಬನು ಮಾಡಬೇಕು. ರೋಮನ್ನರ ಮನರಂಜನೆಗೆ ಒಳಗಾಗಿದ್ದ, ಗ್ರೀಕ್ ಜನರಿಗೆ ಪೇತ್ರನು ಬರೆಯುತ್ತಿದ್ದನು ಆ ಮನರಂಜನೆಯು ಖಡ್ಗಮಲ್ಲರನ್ನು ಮತ್ತು ಪ್ರಾಣಿಗಳ ನಿಸ್ಸಾಹಾಯಕರಾದ ಅಪರಾಧಿಗಳ ಮೂಲಕ ಕೊಲ್ಲುವ ಘಟನೆಗಳನ್ನು ಒಳಗೊಂಡಿತ್ತು. ಆ ಪ್ರಪಂಚಕ್ಕೆ ಅನುಕಂಪದ ಮತ್ತು ದಯೆಯ ಅನಿವಾರ್ಯವಿತ್ತು.

ಸಭೆಯ ಜೀವಿತಕ್ಕೆ ಸಹೋದರರ ಪ್ರೀತಿಯೇ ಮೂಲವಾಗಿದೆ. ಯೇಸು ಕ್ರಿಸ್ತನ ಮೂಲಕ ದೇವರ ಮಕ್ಕಳಾಗುವ ಸಂಬಂಧಕ್ಕೆ ಕರೆಯಲ್ಪಟ್ಟವರಾದ್ದರಿಂದ, ಕ್ರೈಸ್ತರು ಪರಸ್ಪರ ಪ್ರೀತಿಸಬೇಕು. ಈ ವಿಧವಾದ ಪ್ರೀತಿಯನ್ನು ಗ್ರೀಕ್ ಭಾಷೆಯ ನಾಮಪದದಲ್ಲಿ *ಫಿಲದೆಲ್ಫಿಯಾ* ಎಂಬುದಾಗಿದ್ದು, ಪ್ರಕಟನೆಯಲ್ಲಿರುವ ಯೇಸು ಕ್ರಿಸ್ತನ ಒಂದು ಸಭೆ ಇರುವ ಆಸ್ಯ ಸೀಮೆಯ ಒಂದು ಪಟ್ಟಣದ ಹೆಸರಾಗಿರುತ್ತದೆ. ಅಮೇರಿಕದ ಒಂದು ದೊಡ್ಡ ಪಟ್ಟಣಕ್ಕೆ ಈ ಹೆಸರನ್ನು ನೀಡಲಾಗಿದೆ.

ಗ್ರೀಕರ ಆಳವಾದ ಬಾವೋದ್ವೇಗದ ಆಲೋಚನೆಯು, ಹೊಟ್ಟೆಯಿಂದಲೂ, ಮತ್ತು ಹೃದಯದಿಂದಲೂ ಹೊರಹೊಮ್ಮುತ್ತಿತ್ತು. ಪೇತ್ರನ ಪಟ್ಟಿಯಲ್ಲಿ ನಾಲ್ಕನೆಯದಾಗಿ "ಕರುಣೆಯುಳ್ಳವರು," ಎಂಬುದಾಗಿದೆ. "ಒಳ್ಳೆಯ ಹೃದಯ," ಎಂಬ ಅಕ್ಷರಶಃ ಅರ್ಥ, NIVಯಲ್ಲಿ "ಅನುಕಂಪವುಳ್ಳವರಾಗಿರಿ." ಎರಡನೇ ಶತಮಾನದ ಮಧ್ಯಭಾಗದಲ್ಲಿ ಸುರ್ನದ ಪಾಲಿಕಾರ್ಪನು ಫಿಲಿಪ್ಪಿ ಸಭೆಯ ಹಿರಿಯರಿಗೆ "ಅನುಕಂಪವುಳ್ಳವರಾಗಿರಿ ಎಂದು ಬರೆದಿದ್ದಾನೆ, (ಪೇತ್ರನು ಇದೇ ಪದವನ್ನು ಉಪಯೋಗಿಸಿದ್ದಾನೆ) ಎಲ್ಲರಿಗೂ ಕರುಣೆ ತೋಲಿಸಿರಿ, ಚದರಿ ಹೋದವರನ್ನು ಒಟ್ಟುಗೂಡಿಸಿರಿ, ಬಲಹೀನರನ್ನು ಪೋಷಿಸಿರಿ, ವಿಧವೆಯರನ್ನು ಅಲಕ್ಷಿಸಬೇಡಿರಿ, ಬಡವರನ್ನು ದಿಕ್ಕಿಲ್ಲದವರನ್ನು ಕರುಣಿಸಿರಿ."

ಪೇತ್ರನ ಪಟ್ಟಿಯಲ್ಲಿರುವ ಕೊನೆಯದಾದ "ವಿನಯತೆ" ಎಂಬ ಪದವನ್ನು KJV ಬೈಬಲ್ ತರ್ಜುಮೆ ಮಾಡಿರುವ ಕಾಣರ, NASB ಹಾಗೂ ಇತರೆ ತರ್ಜುಮೆಗಳು "ದೀನರಾಗಿರಿ"

ಎಂದು (ಅಥವಾ ಅದೇ ರೀತಿ) ತಿಳಿಸಿರುವುದು ಅದರ ಹಿನ್ನೆಲೆಯ ಮೂಲದ ವ್ಯತ್ಯಾಸವಾಗಿರುತ್ತದೆ. ವಿನಯತೆ ಮತ್ತು ದೀನತೆಯ ನಡುವೆ ಇರುವ ಅರ್ಥವನ್ನು ತಿಳಿಯುವುದು ಮಾತ್ರವಲ್ಲ. ದೀನ ಮನುಷ್ಯನು ಇತರರ ಕುರಿತು ಚಿಂತಿಸುತ್ತಾನೆ ವಿನಃ ಅವನು ಯಾವುದರಲ್ಲಿ ಯಶಸ್ವಿಯಾಗಿದ್ದಾನೆ ಎಂದು ಯೋಚಿಸುವದಿಲ್ಲ ಅವನಿಗೆ ಎಷ್ಟು ತಿಳಿದೆ ಎಂಬುದಾಗಿಯಾಗಲಿ, ಅಥವಾ ಅವನು ಏನನ್ನು ಸಂಪಾದನೆ ಮಾಡಿದ್ದಾನೆ ಎಂಬುದಾಗಿಯಾಗಲೀ ಯೋಚಿಸುವದಿಲ್ಲ. ಅವನ ಹಿಂದೆ ಆಸಕ್ತಿಯು ಇರುತ್ತದೆ. ಬಹುಶಃ ಅದರ ವಿರುದ್ಧ ಪದವನ್ನು ತಿಳಿಯುವ ಮೂಲಕ ಇದನ್ನು ಅರ್ಥೈಸಬಹುದು. ಕೊಚ್ಚಿಕೊಳ್ಳುವುದು ಅಥವಾ ಸ್ವಾರ್ಥ ಚಿಂತಕರಾಗಿರುವದು. ನಾವು ತಪ್ಪು ಮಾಡಿರಬಹುದು ಎಂದು ತಿಳಿದು ಸರಿಪಡಿಸಿಕೊಳ್ಳುವ ಕಾರ್ಯಕ್ಕೆ ದೀನತೆಯು ಸಹಾಯಿಸುತ್ತದೆ, ನಾವು ನಮ್ಮ ತಪ್ಪುಗಳನ್ನು ಒಪ್ಪಿ ಅರಿಕೆ ಮಾಡುವಂಥದ್ದು ನಮ್ಮ ಸದ್ಗುಣದ ಬಲವನ್ನು ತೋರ್ಪಡಿಸುತ್ತದೆ.

ನಾಗರೀಕತೆಯ ಕುರಿತು ಒಂದು ಹಳೆಯದಾದ ನಿಯಮವು ಈ ರೀತಿ ಹೇಳುತ್ತದೆ. ಕರುಣೆಯು ನಾವು ಹಿಂದಿರುಗಿಸುವ ಕ್ರಯವಾಗಿರಬೇಕು. ಅದನ್ನು ಇನ್ನೊಂದು ಶಬ್ದದಲ್ಲಿ ಮುಯ್ಯಿಗೆ ಮುಯ್ಯಿ ತೀರಿಸುವ ಕಾಯ್ದೆ ಎಂದು ಕರೆಯುತ್ತೇವೆ. ವಿಮೋಚನ ಕಾಂಡ 21:23, 24 ಶಾಸ್ತ್ರೀಯ ಮಾದರಿಯಲ್ಲಿ ಬರೆಯಲಾಗಿದೆ: "... ಪ್ರಾಣಕ್ಕೆ ಪ್ರತಿಯಾಗಿ ಪ್ರಾಣ, ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಕೈಗೆ ಕೈ, ಕಾಲಿಗೆ ಕಾಲು, ಬರೆಗೆ ಬರೆ, ಗಾಯಕ್ಕೆ ಗಾಯ, ಏಟಿಗೆ ಏಟು, ಈ ಮೇರೆಗೆ ದಂಡನೆಯಾಗಿಬೇಕು" (ಮತ್ತಾಯ 5:38-42), ಕ್ರಿಸ್ತನು ಮುಂದಾಗಿ ಮಾಡಿರುವಂತೆ, ಪೇತ್ರನು ಮುಯ್ಯಿಗೆ ಮುಯ್ಯಿ ತೀರಿಸುವ ಕಾಯ್ದೆಗಿಂತ ಇನ್ನೂ ಉತ್ತಮವಾದ ಕಾಯ್ದೆಯನ್ನು ತಿಳಿಸಿ: "ಕೆಟ್ಟದ್ದಕ್ಕೆ ಕೆಟ್ಟದ್ದನೇ ತೀರಸಬೇಡ, ಅಥವಾ ನಿಂದೆಗೆ ಪ್ರತಿನಿಂದನೆಯನ್ನು ಮಾಡಬೇಡ ಅದರ ಬದಲಾಗಿ ಆಶೀರ್ವಾದವನ್ನು ನೀಡು; ಹೀಗೆ ಮಾಡುವದರಿಂದ ನೀವು ಆಶೀರ್ವಾದವನ್ನು ಬಾಧ್ಯವಾಗಿ ಹೊಂದುವಿರಿ" (3:9).

ಕೆಟ್ಟದ್ದಕ್ಕೆ ಒಳ್ಳೆಯದನ್ನು ಶಾಪಕ್ಕೆ ಆಶೀರ್ವಾದವನ್ನು ಕ್ರೈಸ್ತರು ಮಾಡಬೇಕೆಂದು ಹೇಳಿರುವುದು, ಕ್ರೈಸ್ತ ಧರ್ಮವನ್ನು ಪರೀಕ್ಷೆಗೆ ಒಳಪಡಿಸುತ್ತದೆ. ಪೇತ್ರನು ಕೀರ್ತನೆ 34:12-16ನ್ನು ನೆನಪು ಮಾಡಿರುವನು. "ಬಹುದಿವಸ ಬದುಕಿ ಸುಖವನ್ನು ಅನುಭವಿಸಬೇಕೋ," "ಕೀರ್ತನೆಗಾರನು ಹೇಳವುದು," "ಕೆಟ್ಟದ್ದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ." ಈ ಪಾಠವನ್ನು ನಮ್ಮಲ್ಲಿ ಅನೇಕರು ಕಲಿಯಬಹುದು. ಇನ್ನೊಂದು ಅರ್ಥದಲ್ಲಿ, ದೈವ ಭಕ್ತಿಯ ಜೀವಿತವು, ಸ್ವಾರ್ಥವನ್ನು ಇಲ್ಲದಂತೆ ಮಾಡುತ್ತದೆ. ಯೋಹಾನ 12:24, 25ರಲ್ಲಿಯೂ ಮತ್ತು ಇತರ ಕಡೆಗಳಲ್ಲಿಯೂ ಯೇಸು ಈ ವ್ಯಾಖ್ಯಾನವನ್ನು ಮಾಡಿದ್ದಾನೆ. ಕೆಟ್ಟದ್ದರಿಂದ ತಿರುಗಿಕೊಳ್ಳುವವನು ಮತ್ತು ಸಮಾದಾನವನ್ನು ಹುಡುಕುವವನು, ಸತ್ಯವನ್ನು ಮತ್ತು ನೀತಿಯನ್ನು ಹೊಂದಿರುವವನು, ರತ್ನಪಟ್ಟಿಯನ್ನು ಮತ್ತು ಆಳವಾದ ಜೀವನದ ಐಶ್ವರ್ಯವನ್ನು, ಪ್ರತಿಫಲವನ್ನು ಹೊಂದಿರುವವನಾಗಿದ್ದಾನೆ. "ಯಾಕಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ ... ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ" (3:12).

ಬಹುಶಃ ಹಳೇ ಒಡಂಬಡಿಕೆ ಹಾಗೂ ಹೊಸ ಒಡಂಬಡಿಕೆಯ ನಡುವೆ ಬಹಳಷ್ಟನ್ನು ತೊರೆದು ಬಿಡುವವರಾಗಿದ್ದೇವೆ. ಇಸ್ರಾಯೇಲ್ಯರೊಂದಿಗೆ ಮಾತನಾಡಿದ ದೇವರೆ, ಸಭೆಯೊಂದಿಗೂ ಮಾತನಾಡಿದ್ದಾನೆ. ಇಸ್ರಾಯೇಲ್ಯರ ಜೀವಿತದ ನಿಯಮಗಳನ್ನು ಬಯಲು ಮಾಡಿದ ನಿಯಮಗಳನ್ನು ಪೇತ್ರನು, ತಿಳಿಸಲು ವಿಷಾದಿಸಲಿಲ್ಲ.

## ದುರುದ್ದೇಶವುಳ್ಳವರಿಗೆ ನ್ಯಾಯವಾದ ಉತ್ತರ ನೀಡಿರಿ (3:13-17)

ಕ್ರೈಸ್ತರ ಬಾಧೆಗಳ ಕುರಿತಾಗಿ ಪೇತ್ರನು ಎರಡನೆಯ ಸಾರಿ ತನ್ನ ಪತ್ರದಲ್ಲಿ ತಿಳಿಸುತ್ತಿದ್ದಾನೆ (3:13-17; 1:6-9 ಮೊದಲನೆಯದು). ಘನವುಳ್ಳದ್ದನ್ನು ಮತ್ತು ಒಳ್ಳೆಯದನ್ನು ಮಾಡುತ್ತಾ

ಬಾಧೆಗಳನ್ನು ಅನುಭವಿಸಬೇಕು ಎಂಬ ಪದ್ಧತಿಯಲ್ಲ (3:13). ಹೇಗೂ, ಇದು ಸಾಧ್ಯವಾದ ಸಂಗತಿ ಎಂದು ಅಪೊಸ್ತಲರು ಒಪ್ಪಿಕೊಂಡಿದ್ದರು. ಈ ರೀತಿ ಸಂಭವಿಸಬಹುದಾದ ವಿಷಯಗಳ ಕುರಿತು ಪೇತ್ರನು ಬುದ್ಧಿವಾದ ಹೇಳಿದನು.

## ನೀತಿಯ ನಿಮಿತ್ತ ಬಾಧೆಯನ್ನು ಅನುಭವಿಸಿರಿ

ಒಳ್ಳೆದರ ನಿಮಿತ್ತವಾಗಿಯೇ ಸಕಲ ಬಾಧೆಗಳು ಸಂಭವಿಸುತ್ತವೆ ಎಂಬುದಾಗಿ ಇರುವದಿಲ್ಲ. ಕೆಲವು ವಿಧವಾದ ವರ್ತನೆಗಳು ಯಾರಿಗಾದರು ಅಪಾಯವನ್ನು ತರಬಹುದು, ಅವನು ಕ್ರೈಸ್ತನಾಗಿರಬಹುದು ಅಥವಾ ಆಗಿರದೆ ಇರಬಹುದು. ಅವನು ತಪ್ಪನ್ನು ಮಾಡಿ, ಒಬ್ಬ ಕ್ರೈಸ್ತನು ಕೆಟ್ಟದ್ದನ್ನು ಮಾಡಿ, ಸಭೆಯ ಹಿಂದೆ ಉಳಿದು ತನ್ನ ನಂಬಿಕೆಯ ನಿಮಿತ್ತವಾಗಿ ಅವನನ್ನು ಅಲ್ಲಗಳೆಯಲಾಗಿದೆ ಎಂದು ಹೇಳುವವನಾಗಿದ್ದಾನೆ, ಯಥಾರ್ಥತೆ ಇಲ್ಲದೆ ಇರುವದರಿಂದಲೂ, ಸುಳ್ಳಾಡುವದರಿಂದಲೂ, ಕಳ್ಳತನದಿಂದಲೂ, ಅಥವಾ ಯಾವುದೇ ಇತರೆ ಕಾರ್ಯಗಳು ಇರುವದರಿಂದಲೂ, ಆಶೀರ್ವಾದವು ಬರಲಾರದು.

ಅವನ ಓದಗರಿಗೆ ಒಳ್ಳೆಯದನ್ನು ಮಾಡುವದರ ಮೂಲಕ ಸಂಭವಿಸಬಹುದಾದ ಬಾಧೆಗಳ ಕುರಿತು ಪೇತ್ರನು ಸಲಹೆಯನ್ನು ನೀಡಿದನು (3:14), ಪ್ರವಾದಿಯಾದ ಯೆಶಾಯನ ಮಾತುಗಳು: "ಇವರು ಯಾವದಕ್ಕೆ ಹೆದರುತ್ತಾರೋ ನೀವು ಅದಕ್ಕೆ ಹೆದರಬೇಡಿರಿ" (ಯೆಶಾಯ 8:12). ಮನುಷ್ಯರು ಹಿಂಸಿಸಬಹುದು ಅಥವಾ ಕ್ರೈಸ್ತರನ್ನು ಕೊಲ್ಲಲೂ ಬಹುದು, ಅದಕ್ಕಿಂತಲೂ ಹೆಚ್ಚಿನದನ್ನು ಅವರು ಮಾಡಲಾರರು. ಯೇಸು ಕ್ರಿಸ್ತನು ಅಪೊಸ್ತಲರನ್ನು ಅಲ್ಪ ಅವಧಿಯ ಸೇವಾ ಕಾರ್ಯಕ್ಕೆ ಕಳುಹಿಸಿದ ಕುರಿತಾಗಿ, ಬಹುಶಃ ಪೇತ್ರನು ನೆನಪು ಮಾಡುತ್ತಿರಬಹುದು: "ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ. ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ" (ಮತ್ತಾಯ 10:28). ಇಬ್ರಿಯ ಗ್ರಂಥ ಕರ್ತನು ಇದಕ್ಕೆ ಸೇರಿಸಿ ಹೇಳುವದೇನೆಂದರೆ, "ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು?" (ಇಬ್ರಿಯ 13:6).

## ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಿರಿ

ಪ್ರಪಂಚದಲ್ಲಿ ಜರುಗುವ ಘಟನಾವಳಿಗಳ ಮೇಲೆ ಕ್ರೈಸ್ತರು ಯಾವ ಹತೋಟಿಯನ್ನು ಹೊಂದಿರಲಾರರು, ಅನೇಕ ಸಾರಿ ಅದು ಅವನಿಗೆ ಬಾಹಿರವಾದದ್ದಾಗಿರುತ್ತದೆ. ಒಂದು ವೇಳೆ ಅದು ಆಕಸ್ಮಿಕವಾಗಿ ಅಥವಾ ಭಕ್ತಿ ಇಲ್ಲದವರ ಮೂಲಕ ಜರುಗಿರಬಹುದು, ಕೆಲವು ಸಾರಿ ಉತ್ತಮರಾದ ಜನರು ಸಹ ಹಿಂಸೆಗೆ ಒಳಗಾಗುತ್ತಾರೆ. ನಮಗೆ ಸಂಭವಿಸುವದರ ಬಗ್ಗೆ ನಾವು ಹತೋಟಿ ಸಾಧಿಸಲು ಸಾಧ್ಯವಿಲ್ಲ. ನಮ್ಮ ಹೃದಯದಲ್ಲಿರುವದನ್ನು ಮಾತ್ರ ನಾವು ಹತೋಟಿಗೆ ತರಬಹುದು; ನಮ್ಮ ಹೃದಯದಲ್ಲಿ ಕ್ರಿಸ್ತನನ್ನೆ ಪರಿಶುದ್ಧನನ್ನಾಗಿ ಕಾಣಬಹುದು (3:15). ಆತನನ್ನೆ ಪ್ರತಿಷ್ಟೆ ಪಡಿಸುವುದು ಅಂದರೆ, ನಮ್ಮ ಪ್ರೀತಿಯನ್ನು ಆತನಿಗೆ ಮಾತ್ರ ಮೀಸಲಿರಿಸುವುದು, ಆತನಿಗೆ ಭಕ್ತಿಯಿಂದ ನಡಕೊಳ್ಳುವುದು, ಮತ್ತು ಆತನನ್ನು ಗೌರವಿಸುವದು. ಆತನಿಗೆ ವಿಧೇಯರಾಗುವುದೇ ನಮ್ಮ ಆಧ್ಯತೆಯಾಗಿರಬೇಕು.

## ಉತ್ತರ ನೀಡಲು ಸನ್ನದ್ಧರಾಗಿರಿ

ಪೇತ್ರನು ಮುಂದೆ ತಿಳಿಸುತ್ತಾ, "... ಕೇಳುವವರೆಲ್ಲರಿಗೆ ಉತ್ತರ ಹೇಳುವದಕ್ಕೆ ಯಾವಾಗಲೂ ಸಿದ್ಧವಾಗಿರಿ. ನಿಮ್ಮ ನಿರೀಕ್ಷೆಗೆ ಆಧಾರವೇನೆಂದು ಕೇಳುವವರಿಗೆ ಉತ್ತರಿಸಿ ..." (3:15). ಇಂಗ್ಲೀಷ್ ಭಾಷೆಯ "ತಪ್ಪು ಒಪ್ಪಿಕೊಳ್ಳುವಿಕೆ" ಎಂಬ ಪದವನ್ನು ಗ್ರೀಕ್ ಭಾಷೆಯಲ್ಲಿ "ಪ್ರತಿವಾದ" ಎಂದು ಈ ವಚನದಲ್ಲಿ ತಿಳಿಸಲಾಗಿದೆ, ಆದರೆ ಗ್ರೀಕ್ ಪದದಲ್ಲಿ, "ತಪ್ಪು ಒಪ್ಪಿಗೆ" ಎಂಬುದಾಗಿ ಇರುವದಿಲ್ಲ. ಕ್ರೈಸ್ತ ವಿಶ್ವಾಸದ ಕುರಿತಾಗಿ ನ್ಯಾಯವಾದ

ಬೋಧನೆಯನ್ನು ಮಾಡುವ ವಿಷಯವನ್ನು ಪ್ರತಿಪಾದನೆ ಎಂದು ಹೇಳುತ್ತಾರೆ. ಶತಮಾನದ ಆದಿಯಲ್ಲಿ ಕ್ರೈಸ್ತ ಸಭೆಯಲ್ಲಿ ಅನೈತಿಕ ಆಚರಣೆಗಳು ನಡೆಯುತ್ತಿವೆ ಎಂಬುದಾಗಿ ಜನರು ಅಪಾಧಿಸಿದರು, ಅವರು ಕುಟುಂಬಗಳನ್ನು ಮುರಿಯುವವರು, ಸರ್ಕಾರವನ್ನು ಕೀಳಾಗಿ ಕಾಣುತ್ತಿದ್ದರು. ಮೂಡನಂಬಿಕೆಯಲ್ಲಿ ಪಾಲಗಾರರು ಎಂದು ಅಪಾದಿಸಿದರು. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು, ಪಂಡಿತರುಗಳು "ಪ್ರತಿಪಾದನೆ" ಎಂಬ ವಿಷಯವನ್ನು ಮುಂಡಿಸಿದರು. ಚಕ್ರವರ್ತಿಗಳಿಗೂ ಮತ್ತು ಅಧಿಕಾರ ನಡಿಸುವ ಅಧಿಕಾರಗಳ ಜೊತೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು. "ತಪ್ಪು ಒಪ್ಪಿವಿಕೆ" ಎಂದರೆ ಕ್ರೈಸ್ತ ಬೋಧನೆಗಳ ಮತ್ತು ಆಚರಣೆಗಳ ಕುರಿತಾಗಿ, ನ್ಯಾಯವಾದ ಮತ್ತು ಯೋಗ್ಯವಾದ ಕಾರಣಗಳನ್ನು ಮನವರಿಕೆ ಮಾಡಿಕೊಡುವುದು ಎಂಬ ಅರ್ಥವಾಗಿದೆ.

ಇಪ್ಪತ್ತನೆ ಶತಮಾನದಲ್ಲು, ಕ್ರೈಸ್ತ ವಿಶ್ವಾಸದ ಆಂತರ್ಯದ ವಿಷಯಗಳಿಗೆ ವಿರುದ್ಧ ವಾಗಿ ಆಕ್ರಮಣಗಳು ನಡೆದಿವೆ. ಮನುಷ್ಯನ ಇತಿಹಾಸದಲ್ಲಿ ಬೈಬಲಿನಲ್ಲಿರುವ ದೇವರ ಸಾಕ್ಷಿಯ ಕ್ರಿಯೆಗಳಿಗೆ, ಸವಾಲುಗಳು ಎಲ್ಲಾ ಕಡೆಗಳಿಂದಲೂ ಬಂದಿರುತ್ತವೆ. ಈಗಲೂ ಸಹ ಸಭೆಗಳು ಪ್ರತಿಪಾದಿಸಬೇಕಾಗಿದೆ, ಇದರಲ್ಲಿ ಸಂದೇಹವಿಲ್ಲ.

ಉತ್ತರಗಳನ್ನು ನೀಡಲು, ಕ್ರೈಸ್ತರು ಅಧ್ಯಾಯನ ಮಾಡಬೇಕಿತ್ತು, ಕೇವಲ ಉತ್ತರ ನೀಡುವುದು ಮಾತ್ರ ಸಾಕಾಗಿರಲಿಲ್ಲ, "ಆದರೆ ಅದನ್ನು ಸಾತ್ವಿಕತ್ವದಿಂದಲೂ ಮನೋ ಭೀತಿಯಿಂದಲೂ ಹೇಳಿರಿ" (3:15) ಎಂದು ಅಪೊಸ್ತಲರು ತಿಳಿಸಿದರು. ಪೂರ್ಣ ಮನಸ್ಸಾಕ್ಷಿಯಿಂದ ಸತ್ಯವನ್ನು ಹುಡುಕುವವರು ಸಂದೇಶವನ್ನು ಕೇಳಿ ಕ್ರಿಸ್ತನಿಂದ - ದೂರವಾಗದೆ, ಪ್ರಸಂಗಿಯ ದೋಷಪೂರಕ, ಕರುಣೆಯಿಲ್ಲದ ಮನೋಭಾವನೆಯ ನಿಮಿತ್ತ ದೂರವಾಗಿದ್ದಾರೆ. ಪ್ರಸಂಗಿಯ ಸಂದೇಶಕ್ಕೂ ಮತ್ತು ಅವನ ಪ್ರತಿಪಾದಿಸಿದ ರೀತಿಗೂ ಇರುವ ವ್ಯತ್ಯಾಸವನ್ನು ನೋಡಿ, ಕೆಲವರು ತಲೆ ಅಲ್ಲಾಡಿಸಿ ಹೊರಟು ಹೋಗುತ್ತಾರೆ. ಸುವಾರ್ತೆಯ ಪ್ರತಿಯೊಬ್ಬ ಬೋಧಕನು, ತಕ್ಕಮಟ್ಟಿಗೆ ತನ್ನನ್ನು ತಾನೇ ಬೋಧಿಸಿಕೊಳ್ಳುತ್ತಾನೆ. ಕ್ರಿಸ್ತನ ಸಂದೇಶವನ್ನು ಸಾತ್ವಿಕತ್ವದಿಂದಲೂ ಮತ್ತು ಮನೋಭೀತಿಯಿಂದಲೂ ಹೇಳಿರಿ ಎಂದು ಪೇತ್ರನು ತಿಳಿಸುತ್ತಾನೆ.

### ಒಳ್ಳೆ ಮನಸ್ಸಾಕ್ಷಿಯನ್ನು ಕಾಪಾಡಿಕೊಳ್ಳಿರಿ

"ಮನಸ್ಸಾಕ್ಷಿ" ಎಂಬ ಪದವನ್ನು ಪೇತ್ರನು ಉಪಯೋಗಿಸಿದ್ದಾನೆ. ಮೂರು ಸಾರಿ ಪ್ರಾಯೋಜಿಸಲಾಗಿದೆ (2:19; 3:16, 21). ಪೌಲನು ಸಹ ತನ್ನ ಪತ್ರದಲ್ಲಿ ಪದೇ ಪದೇ ಈ ಪದವನ್ನು ಉಪಯೋಗಿಸಿದ್ದಾನೆ. ಒಳ್ಳೆಯ ಮನಸ್ಸಾಕ್ಷಿವುಳ್ಳವರು ಅಂದರೆ, ವೈಯಕ್ತಿಕ ವಾದ ಸಮಗ್ರ ಚಿತ್ತವನ್ನು ಹೊಂದಿರುವವರು ಎಂಬುದಾಗಿ. ತೀರ್ಮಾನದಲ್ಲಿ ತಪ್ಪೆಸಗುವದು ಒಂದು ವಿಷಯವಾದರೆ, ಮಾಡಲಿರುವಂಥ ಕ್ರಿಯೆಯು ಪ್ರಾರಂಭದಿಂದಲೂ ಕೆಟ್ಟದ್ದೆ ಎಂದು ತಿಳಿದಿದ್ದರು, ಅದನ್ನು ಮಾಡುವದರಲ್ಲಿ ತೊಡಗಿಸಿಕೊಳ್ಳುವುದು ಇನ್ನೊಂದು ವಿಷಯವಾಗಿದೆ. ಸಮಗ್ರ ಚಿತ್ತವನ್ನು ಹೊಂದಿರುವ ಕ್ರೈಸ್ತ ಸ್ತ್ರೀ ಅಥವಾ ಪುರುಷರಾಗಲೀ, ಆಕೆ ಅಥವಾ ಅವನು ಮಾದರಿಯ ಕ್ರೈಸ್ತ ಜೀವಿತವನ್ನು ಜೀವಿಸುತ್ತೇವೆ ಎಂದು ಪ್ರತಿಪಾದಿಸುವಂಥವರನ್ನು ಹೀನಾಯ ವಾಗಿ ನಿಂದಿಸುವ ವೈರಿಯು ದೇವಜನರ ಕುರಿತಾಗಿ ತನಗೆ ತಾನೇ ಅವಮಾನಕೊಳ್ಳ ಗಾಗುತ್ತಾನೆ. ಇಂಥ ಒಂದು ಒಳ್ಳೆಯ ಮನಸ್ಸಾಕ್ಷಿಯ ಮೂಲಕ ಕ್ರೈಸ್ತರು ತಮ್ಮ ವೈರಿಗಳನ್ನು ಸೋಲಿಸುತ್ತಾರೆ. ಮತ್ತು ವೈರಿಗಳು ಕ್ರೈಸ್ತ ಸಂದೇಶದ ನಿಮಿತ್ತ ಆಸಕ್ತಿ ಪಡುವಂತೆ ಮಾಡುತ್ತಾರೆ.

## ದೋಷಾರೋಪಣೆ ಮಾಡುವವರಿಗೆ ಕ್ರಿಸ್ತನ ಶಿಲುಬೆಯ ಮೂಲಕ ಉತ್ತರಿಸಿ (3:18-22)

ಕೆಟ್ಟದ್ದಕ್ಕೆ ಒಳ್ಳೆಯದನ್ನೆ ಮಾಡುವ ಕ್ರಿಯೆ ಅಥವಾ ಇತರ ಯಾವುದೇ ಸಂಗತಿಗಳಿರಬಹುದು, ಅದರ ಮಾದರಿ ಕರ್ತನೆ ಆಗಿರುತ್ತಾನೆ. ಈ ಮೊದಲು ಪೇತ್ರನು ಗುಲಾಮರಿಗೆ ಯೇಸುವೇ

ಮಾದರಿ ಎಂದು ತಿಳಿಸಿರುವನು (2:18-21); ಕೆಟ್ಟದ್ದಕ್ಕೆ ಒಳ್ಳೆಯ ಉತ್ತರ ನೀಡುವಲ್ಲಿಯೂ ಆತನೇ ಪರಿಪೂರ್ಣ ಮಾದರಿಯಾಗಿರುವನು ಎಂದು ಸಹ ತಿಳಿಸಿರುವನು. ಅನೀತಿವಂತರಿಗೋಸ್ಕರ ಯೇಸು ಮರಣಹೊಂದಿದನು (3:18). ಆತನು ಮನುಷ್ಯರಿಗಾಗಿ ದೈಹೀಕವಾದ ಮರಣ ಹೊಂದಿದ್ದರಿಂದ, ನಮ್ಮನ್ನು ದೇವರ ಬಳಿಗೆ ನಡೆಸಿದ್ದಾನೆ; ಆತನ ಮರಣವೇ ಪೂರ್ಣ ಕಥೆಯಲ್ಲ, ಆತ್ಮದಲ್ಲಿ ಆತನು ಪುನಃ ಜೀವಿಸುವವನಾದನು. ಪುನರುತ್ಥಾನವೇ, ಅಪನಂಬಿಕೆಗೆ ಕ್ರೈಸ್ತರ ಉತ್ತರವಾಗಿದೆ.

ನಂತರ, ಹೊಸ ಒಡಂಬಡಿಕೆಯಲ್ಲಿರುವ, ಎರಡು ಕಷ್ಟಕರವಾದ ವಚನಗಳನ್ನು ನೋಡುತ್ತೇವೆ: 3:19, 20. "ಸೆರೆಯಲ್ಲಿದ್ದ ಆತ್ಮಗಳಿಗೆ ಸುವಾರ್ತೆಸಾರಿದನು" ಎಂಬ ವಿಷಯದಲ್ಲಿ ನಾವು ಏನನ್ನು ಅರ್ಥೈಸಿಕೊಳ್ಳುತ್ತೇವೆ. ನೋಹನ ದಿವಸಗಳಲ್ಲಿ ಅವೀಧೆಯರಾಗಿದ್ದವರು ಯಾರು? ಅಲ್ಲಿ ಅಸಹಜವಾದ ಅರ್ಥವಿದೆ, ವಚನದ ಹಿನ್ನೆಲೆಯನ್ನು ಮತ್ತು ಅದರ ವ್ಯಾಕರಣವನ್ನು ಕೂಲಂಕುಶ ಪರಿಶೀಲನೆ ಮಾಡಿದಾಗ್ಯೂ ಅದನ್ನು ಅರ್ಥೈಸುವುದು ಅಸಾಧ್ಯವಾಗುತ್ತದೆ. ಇದರ ಕುರಿತಾಗಿ ಹೆಚ್ಚು ಚರ್ಚೆ ಅನಾವಶ್ಯಕವಾಗಿದೆ, ಅದನ್ನು ಎರಡು ಸಾಮಾನ್ಯವಾದ ರೀತಿಯಲ್ಲಿ ತಿಳಿಯಬಹುದು.

ಅದರ ಪ್ರಾರಂಭದ ವಾಖ್ಯಾನದಲ್ಲಿರುವ ಪ್ರಮುಖ ಪ್ರಶ್ನೆಯ ತಾತ್ಪರ್ಯವೇನು: "ಇದಲ್ಲದೆ," "ಯಾರ ಮುಖಾಂತರ" (KJV) ಅಥವಾ (NIV), ವಚನ 18ರಲ್ಲಿರುವ "ಆತ್ಮಗಳ" ಎಂಬ ಕೊನೆಯ ಪದನಾಮವಾಗಿದೆ. ಅನೇಕರು ಇದನ್ನು ಕ್ರಿಯಾ ವಿಶೇಷಣಕ್ಕೆ ಸಂಬಂಧಿಸಿದ ಪದವೆಂದು ಭಾವಿಸುತ್ತಾರೆ. ಒಂದು ವೇಳೆ ಈ ರೀತಿ ಇದ್ದರೆ, ಯೇಸು ಇದನ್ನು ಆತ್ಮೀಕವಾಗಿ ಬೋಧಿಸಿದನೇ ವಿನಃ, ಅಕ್ಷರಶಃ ನೂತನ ದಿವಸದವರಿಗಾಗಿ ಅಲ್ಲ, ಎಂದು ಅಪೊಸ್ತಲನು ತಿಳಿಸುತ್ತಾನೆ. ನೋಹನ ಬೋಧನೆ ಅಥವಾ ಇನ್ನೂ ಬೇರೆ ರೀತಿಯಾದ ಪ್ರಸಂಗಿಗಳು ಇದನ್ನು ಯೇಸುವಿನ ಬೋಧನೆ ಎಂದೇ ತಿಳಿದಿರಬಹುದು. ಅವಿಧೇಯವಾದ ಆತ್ಮಗಳು "ಸೆರಮನೆಯಲ್ಲಿದ್ದವು" ಅಂದರೆ ಪೇತ್ರನು ಬೋಧಿಸುವಾಗ ಅವುಗಳು ಸಮಾದಿಯಲ್ಲಿದ್ದವು; ನೋಹನ ಮಾತುಗಳ ಮೂಲಕ ಯೇಸು ಬೋಧಿಸಿದಾಗ, ಅವುಗಳ ಜೀವದಿಂದ ಇದ್ದವು ಎಂಬುದಾಗಿದೆ.

ಇನ್ನೂ ಕೆಲವರು ಅದರ ಸರ್ವನಾಮದ "ಯಾವುದರಲ್ಲಿ" ಎಂಬ ತರ್ಜುಮೆಯನ್ನು KJVಯಲ್ಲಿ ಇರುವಂತೆ ಯೇಸು ಸಂಪೂರ್ಣವಾಗಿ ದೈಹೀಕ ಮರಣವನ್ನು ಅನುಭವಿಸಿ, ಆತ್ಮೀಕವಾಗಿ ತಿರುಗಿ ಜೀವಿಸಿದನು ಎಂದು ತಿಳಿಯುತ್ತಾರೆ. ಯೇಸುವಿನ ಕ್ರೂಜೆ ಮತ್ತು ಪುನರುತ್ಥಾನಾದ ನಡುವಿನ ಸಮಯದಲ್ಲಿ, ಯೇಸು ಹೇಡಿಸ್‌ಗೆ ಇಳಿದುಹೋಗಿ ಅಲ್ಲಿದ್ದ "ಆತ್ಮಗಳಿಗೆ" ಪಾಪದ ಮತ್ತು ಮರಣದ ಮೇಲಿನ ಜಯವನ್ನು ತಿಳಿಯಪಡಿಸಿದನು. ಅಲ್ಲಿ ಮಾನಸಾಂತರ ಪಡಿಸಿ ಎಂದು ಪ್ರಸಂಗಿಸದೆ ಇರಬಹುದು, ಪಾಪದ ಮೇಲಿನ ಜಯಕ್ಕಾಗಿ ಸ್ತುತಿ ಮಹಿಮೆಯನ್ನು ಪ್ರಸಂಗಿಸಿರಬಹುದು. ಕೀರ್ತನೆ 16:8-11ರಿಂದ ಪೇತ್ರನು ವಚನವನ್ನು ಆದುಕೊಂಡು ಈ ವ್ಯಾಖ್ಯಾನಕ್ಕೆ ಆಧಾರವಾಗಿ ಅಪೊಸ್ತಲರಕೃತ್ಯಗಳು 2:22-28ರಲ್ಲಿ ನೇಡುವೆವು. ಹೇಡಿಸ್‌ನಲ್ಲಿ (ಮರಣ ಹೊಂದಿದವರು ಇರುವ ಲೋಕ ಆದರೆ KJVಯಲ್ಲಿ ಹೇಳಿದಂತೆ ನರಕವಲ್ಲ). ಯೇಸುವಿನ ಆತ್ಮವು ಬಿಟ್ಟು ಬಿಡಲಿಲ್ಲವೆಂಬ ವಾಸ್ತವಿಕತೆಯು ಆತನು ಅಲ್ಲಿದ್ದನೆಂದು ಸೂಚಿಸುತ್ತದೆ.

ಈ ಮೇಲ್ಕಂಡ ವ್ಯಾಖ್ಯಾನಗಳು ಅವುಗಳದ್ದೇ ಆದ ಬಲ ಮತ್ತು ಬಲಹೀನತೆಯನ್ನು ಹೊಂದಿರುತ್ತವೆ, ಹೊಸ ಒಡಂಬಡಿಕೆಯಲ್ಲಿ ನಾವು ತಿಳಿದಿರುವ ಯೇಸುವಿನ ವಿಷಯಗಳಿಗೆ ಇನ್ನೂ ಉತ್ತಮವಾದ ರೀತಿಯಲ್ಲಿ ಸ್ಪಂದಿಸುತ್ತವೆ. ಕ್ರೂಜೆಯ ಮರಣದಲ್ಲಿ, ಯೇಸು ಪಾತಾಳಕ್ಕೆ ಇಳಿದು ಹೋದನು ಎಂಬ ಬೋಧನೆಗೆ ಹೊಸ ಒಡಂಬಡಿಕೆಯಲ್ಲಿ ಹೆಚ್ಚ ಆಧಾರಗಳಿರುವದಿಲ್ಲ, 3:18-22 ಮಾತ್ರ ಇದರ ಕುರಿತಾಗಿ ಹೇಳುತ್ತದೆ. ಈ ಕಾರಣದಿಂದಲೇ, ನೋಹನ ದಿನಗಳಲ್ಲಿ ಇದ್ದ ಜನರಿಗೆ ನೋಹನ, ಮೂಲಕ ಮತ್ತು ಇತರ ಪ್ರವಾದಿಗಳ ಮೂಲಕ ಯೇಸು

ಮಾತನಾಡಿದನು ಎಂದು ಅರ್ಥೈಸುವುದು (1:10, 11).

ಕ್ರೈಸ್ತರ ರಕ್ಷಣೆಯು, ನೋಹನ ದಿವಸಗಳಲ್ಲಿದವರ ರಕ್ಷಣೆಗೆ ಸಮಾನವಾದದ್ದರಿಂದ ನೋಹ ಮತ್ತು ಕುಟುಂಬದವರ ಕುರಿತಾಗಿ ಪೇತ್ರನು ತಿಳಿಸಿದ್ದಾನೆ (3:21). ನೋಹನಿಗೆ ನೀರಿನ ಮೂಲಕ ರಕ್ಷಣೆ ದೊರೆಯಿತು, ಕ್ರೈಸ್ತರಿಗೂ ಅದೇ ರೀತಿಯಲ್ಲಿ ರಕ್ಷಣೆಯಾಗಿದೆ. ನೋಹನ ದಿವಸಗಳಲ್ಲಿ ಇದ್ದ ಪಾಪದ ಜನಾಂಗವು ನೀರಿನಿಂದ ಕೊಚ್ಚಿ ಹೋಗಿ, ಶುದ್ಧವಾದಂತೆ, ದೀಕ್ಷಾಸ್ನಾನದ ಮೂಲಕ ಕ್ರೈಸ್ತರು ಶುದ್ಧರಾಗಿದ್ದಾರೆ. ಒಂದು ವೇಳೆ, ಅನೀತಿವಂತರಿಗಾಗಿ ಯೇಸು ಸತ್ತು, ಅವರ ಪಾಪಗಳನ್ನು ನಿವಾರಣೆ ಮಾಡಿದ್ದರೆ, ದೀಕ್ಷಾಸ್ನಾನವು ಅತಿ ಅವಶ್ಯವಾಗುತ್ತದೆ. ದೀಕ್ಷಾಸ್ನಾನವು ರಕ್ಷಣೆ ಹೊಂದಿರುವವರನ್ನು ಮತ್ತು ಹೊಂದದೆ ಇರುವವರನ್ನು ಪ್ರತ್ಯೇಕಿಸುತ್ತದೆ. ಪೇತ್ರನು ತಿಳಿಸಿರುವ ದೀಕ್ಷಾಸ್ನಾನವು ದೈಹೀಕವಾದ ತೊಳೆಯುವಿಕೆಯಲ್ಲಿ, ಅದು ಆತ್ಮೀಕವಾದ ವಿಧೇಯತೆಯಾಗಿರುತ್ತದೆ, ಅದು ಒಳ್ಳೆಯ ಮನಸ್ಸಾಕ್ಷಿಗೆ ಉತ್ತರವಾಗಿರುತ್ತದೆ. ಕ್ರಿಸ್ತನಲ್ಲಿರುವ ಭಕ್ತಿಗೆ, ದೀಕ್ಷಾಸ್ನಾನವು ಗುರುತಾಗಿರುತ್ತದೆ. 3:22ರ ದೇವರ ಬಲಗಡೆಯಲ್ಲಿದ್ದಾನೆ ಎಂಬ ವಾಕ್ಯವು ಕೀರ್ತನೆ 110:1ರ ನೆನಪಾಗಿರುತ್ತದೆ. ಇದು ಯೇಸು ಕ್ರಿಸ್ತನ ನಾಯಕತ್ವ ಮತ್ತು ದೈವತ್ವದ ಕುರುಹು ಎಂದು ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ.

## ಮುಕ್ತಾಯ

ದೇವರ ಕುಟುಂಬದಲ್ಲಿ, ಪರಸ್ಪರ ಸಹೋದರ ಸಹೋದರಿಯರಲ್ಲಿ, ಊಹಾ ಪೋಹ ಕವಾಗಿ ಉಂಟಾಗಿರುವ ವಿಷಯಗಳಿಗೆ, ಎಂದೂ ಮುಯ್ಯಿಗೆ ಮುಯ್ಯಿ ತೀರಿಸಬಾರದು. ಕ್ರೈಸ್ತನು ನಂದಿಸಲ್ಪಟ್ಟಾಗಿ, ಆಶೀರ್ವಾದದಿಂದ ಉತ್ತರಿಸಬೇಕು. ತನ್ನ ನಾಲಿಗೆಯನ್ನು ಹತೋಟಿಯಲ್ಲಿಡುವದರ ಮುಖಾಂತರ, ಆಶೀರ್ವಾದವನ್ನು ಶುಭವನ್ನು ತನಗಾಗಿ ಸಂಪಾದಿಸಿಕೊಳ್ಳುತ್ತಾನೆ.

ನಾವು ಒಳ್ಳೆಯದನ್ನೆ ಮಾಡಿ ಬಾಧೆಯನ್ನು ಅನುಭವಿಸುತ್ತಿದ್ದರೆ, ಅದು ನಮಗೆ ಆಶೀರ್ವಾದವೇ. ಜನರು ಸಂಪ್ರದಾಯದ ಪ್ರಕಾರ ಭಯಪಡುವಂತೆ, ಕ್ರಿಸ್ತನಲ್ಲಿರುವ ನಾವು ಭಯಪಡುವವರಲ್ಲ. ಅದರ ಬದಲಾಗಿ, ನಮ್ಮ ನಿರೀಕ್ಷೆಯ ಕುರಿತಾಗಿ ಪ್ರಶ್ನೆ ಕೇಳುವವರಿಗೆ ಉತ್ತರ ನೀಡಲು ನಾವು ಸಿದ್ಧರಾಗಿರಬೇಕು. ಕೆಟ್ಟದ್ದಕ್ಕೆ ಒಳ್ಳೆಯ ಉತ್ತರ ನೀಡಿರುವಲ್ಲಿ ನಮ್ಮ ಕರ್ತನೆ ನಮಗೆ ಮಾದರಿಯಾಗಿದ್ದಾನೆ. ಆತನು ಅನೀತಿವಂತರಿಗೂ ಸಾಯುವದರ ಮೂಲಕ, ಆತನನ್ನು ನಂಬುವವರಿಗೂ ಮತ್ತು ಒಪ್ಪಿಕೊಳ್ಳುವವರಿಗೂ ರಕ್ಷಣೆಯನ್ನು ಅನುಗ್ರಹಿಸುತ್ತಾನೆ. ನೀರಿನ ದೀಕ್ಷಾಸ್ನಾನದ ಮೂಲಕ, ಯೇಸುವಿನ ರಕ್ತದ ಮೂಲಕ ನಮ್ಮ ಪಾಪಗಳಿಂದ ನಮಗೆ ಬಿಡುಗಡೆಯಾಗಿದೆ, ನೋಹ ಮತ್ತು ಅವನ ಕುಟುಂಬ ರಕ್ಷಿಸಲ್ಪಟ್ಟಂತೆ.